## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಧಾರವಾಡ ಜಿಲ್ಲೆಯಲ್ಲಿನ ಹಾನಗಲ್, ಶಿಗ್ಗಾಂವ ತಾಲ್ಲೂಕುಗಳಲ್ಲಿನ ದಶಲಕ್ಷ ಬಾವಿ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ಕರ್ನಾಟಕ ಲೋಕಾಯುಕ್ತರಿಂದ ವಿಚಾರಣೆ-ದಂಡನೆ ವಿಧಿಸುವ ಕುರಿತು.

**ಓದಲಾಗಿದೆ:-**

(1) ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿಪಿ/164/ಇಎನ್‌ಕ್ಯೂ/90 ದಿನಾಂಕ:07-03-1991
(2) ಸರ್ಕಾರದ ಆದೇಶ ಸಂ. ಕೃತೋಇ 06 ಕೃಪವಿ 90, ದಿನಾಂಕ: 28-05-1999
(3) ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರ ಸಂ: 42983/ಜಿಎ/00, ದಿನಾಂಕ:26-09-2000.
(4) ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂ:6482/2001,ದಿನಾಂಕ:06-09-12.

**ಪ್ರಸ್ತಾವನೆ:-**

ಧಾರವಾಡ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ 1988-89 ಮತ್ತು 1989-90ನೇ ಸಾಲಿನಲ್ಲಿ ಹಾನಗಲ್ ಮತ್ತು ಶಿಗ್ಗಾಂವ್ ತಾಲ್ಲೂಕುಗಳಲ್ಲಿ ದಶಲಕ್ಷ ಬಾವಿ ಯೋಜನೆಗಳ ಅನುಷ್ಠಾನದಲ್ಲಿ ಕೃಷಿ ಇಲಾಖೆಯ ಈ ಕೆಳಕಂಡ ಅಧಿಕಾರಿ/ನೌಕರರುಗಳು ಅವ್ಯವಹಾರ ಎಸಗಿ ರೂ.6,77,612.00ಗಳ ಹಣ ದುರುಪಯೋಗ ಮಾಡಿರುವರೆಂಬ ಆಪಾದನೆಗಳ ಬಗ್ಗೆ ಸತ್ಯಾ-ಸತ್ಯತೆಯನ್ನು ತಿಳಿದುಕೊಳ್ಳುವ ಸಲುವಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನಿರ್ಧರಿಸಿದ್ದು, ಅದರಂತೆ ಪ್ರಕರಣದಲ್ಲಿ ಭಾಗಿಯಾಗಿರುತ್ತಾರೆನ್ನಲಾದ ಈ ಕೆಳಕಂಡ ಅಧಿಕಾರಿ/ನೌಕರರುಗಳು ಮೇಲೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿ 1957ರ ನಿಯಮ-11ರ ಪ್ರಕಾರ ಶಿಸ್ತು ಕ್ರಮ ಜರುಗಿಸಲು ಅದೇ ನಿಯಮಾವಳಿ ನಿಯಮ-14(ಎ)ರಡಿಯಲ್ಲಿ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳಿಂದ ಇಲಾಖಾ ವಿಚಾರಣೆ ನಡೆಸಲು ಸದರಿ ಪ್ರಕರಣವನ್ನು ಮೇಲೆ ಕ್ರಮಾಂಕ(1)ರಲ್ಲಿ ಓದಲಾದ ಆದೇಶದಲ್ಲಿ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ ಲೋಕಾಯುಕ್ತಕ್ಕೆ ವಹಿಸಲಾಗಿತ್ತು.

1) ಶ್ರೀ ಹನುಮಂತಾಚಾರ್ಯ, ಹಿಂದಿನ ಉಪ ಕೃಷಿ ನಿರ್ದೇಶಕರು(ಭೂಸಾಸಂ) ಧಾರವಾಡ, (ನಿವೃತ್ತ)
2) ಶ್ರೀ. ಎಸ್.ಪಿ. ಹಿರೇಮಠ್, ಹಿಂದಿನ ಕೃಷಿ ಅಧಿಕಾರಿ(ಭೂಸಾಸಂ ಉಪ ವಿಭಾಗ) ಧಾರವಾಡ,
3) ಶ್ರೀ. ಬಿ.ಎಸ್. ಗಾಣಿಗೇರ್, ಹಿಂದಿನ ಸಹಾಯಕ ಕೃಷಿ ಅಧಿಕಾರಿ (ಭೂಸಾಸಂ) ಶಿಗ್ಗಾಂವ್ ಧಾರವಾಡ ಜಿಲ್ಲೆ.
4) ಶ್ರೀ. ಎಸ್.ಬಿ. ಕುಲಕರ್ಣಿ, ಹಿಂದಿನ ಕೃಷಿ ಸಹಾಯಕ(ಭೂಸಾಸಂ) ಶಿಗ್ಗಾಂವ್ ತಾಲ್ಲೂಕು ಧಾರವಾಡ ಜಿಲ್ಲೆ.
5) ಶ್ರೀ ಕೆ.ಟಿ. ನಾಯ್ಕನೂರ್, ಹಿಂದಿನ ಕೃಷಿ ಸಹಾಯಕ(ಭೂಸಾಸಂ) ಶಿಗ್ಗಾಂವ್ ತಾಲ್ಲೂಕು ಧಾರವಾಡ ಜಿಲ್ಲೆ.
6) ಶ್ರೀ ಎಸ್. ಎಸ್. ಪಾಟೀಲ್, ಹಿಂದಿನ ಕೃಷಿ ಸಹಾಯಕ(ಭೂಸಾಸಂ) ಶಿಗ್ಗಾಂವ್ ತಾಲ್ಲೂಕು ಧಾರವಾಡ ಜಿಲ್ಲೆ. (ನಿಧನರಾಗಿರುತ್ತಾರೆ)
7) ಶ್ರೀ ಎಂ.ಟಿ. ಗಿರಿಜೆ, ಹಿಂದಿನ ಕೃಷಿ ಸಹಾಯಕ ಹಾವೇರಿ ತಾಲ್ಲೂಕು ಧಾರವಾಡ ಜಿಲ್ಲೆ.
8) ಶ್ರೀ ಎಸ್.ಎಂ. ರಾಚಾನಾಯ್ಕ ಹಿಂದಿನ ಕೃಷಿ ಸಹಾಯಕ
9) ಶ್ರೀ ಬಿ.ಜಿ. ನವಲಗುಂದ, ಹಿಂದಿನ ಕೃಷಿ ಸಹಾಯಕ
10) ಶ್ರೀ ಸಿ.ಎಸ್. ವಿರಕ್ತಿಮಠ್, ಹಿಂದಿನ ಸಹಾಯಕ ಕೃಷಿ ಅಧಿಕಾರಿ.
11) ಶ್ರೀ ಎಸ್.ಆರ್. ಹೊಳೆಪ್ಪನವರ್, ಹಿಂದಿನ ಕೃಷಿ ಸಹಾಯಕ.

ಮೇಲ್ಕಂಡ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆದೇಶದ ಪ್ರಕಾರ ಕರ್ನಾಟಕ ಲೋಕಾಯುಕ್ತರವರು, ಸದರಿ ಪ್ರಕರಣದಲ್ಲಿ ವಿಚಾರಣೆ ನಡೆಸಲು ಅಡಿಷನಲ್ ರಿಜಿಸ್ಟ್ರಾರ್ ವಿಚಾರಣೆ-2 ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿದ್ದು, ಅದರಂತೆ ಅವರು ಸದರಿ ಪ್ರಕರಣದಲ್ಲಿ ಕೂಲಂಕುಷವಾಗಿ ವಿಚಾರಣೆ ನಡೆಸಿ, ನೀಡಿದ ವರದಿಯಲ್ಲಿ ಪ್ರಕರಣದಲ್ಲಿ ಭಾಗಿಯಾಗಿದ್ದ ಎಲ್ಲಾ ಅಧಿಕಾರಿ/ನೌಕರರುಗಳ ಮೇಲಿನ ಆರೋಪ ಸಾಬಿತಾಗಿದೆಯೆಂದು ನೀಡಿರುವ ವಿಚಾರಣಾ ವರದಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮಾತೃ ಇಲಾಖೆಯಾದ ಕೃಷಿ ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದ್ದು, ಅದರಂತೆ ಸದರಿ ವಿಚಾರಣಾ ವರದಿಯನ್ನು ಪರಿಶೀಲಿಸಿ ಸದರಿ ವಿಚಾರಣಾ ವರದಿಯ ಪ್ರತಿಯನ್ನು ಪ್ರಕರಣದಲ್ಲಿ ಭಾಗಿಯಾಗಿದ್ದ ಎಲ್ಲಾ ಆರೋಪಿತ ಅಧಿಕಾರಿ/ನೌಕರರುಗಳಿಗೆ 2ನೇ ಕಾರಣ ಕೇಳುವ ಪತ್ರದೊಂದಿಗೆ ಜಾರಿ ಮಾಡಿ ಸದರಿ ವರದಿಯ ಬಗ್ಗೆ ಲಿಖಿತ ಹೇಳಿಕೆಯನ್ನು ನೀಡುವಂತೆ ಸೂಚಿಸಲಾಗಿತ್ತು. ಆರೋಪಿತ ಅಧಿಕಾರಿಗಳು 2ನೇ ಕಾರಣ ಕೇಳುವ ಸೂಚನಾ ಪತ್ರಕ್ಕೆ ನೀಡಿದ ಉತ್ತರವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಪ್ರಕರಣದಲ್ಲಿ ಕರ್ನಾಟಕ ಲೋಕಾಯುಕ್ತರವರು ಮಾಡಿರುವ ಶಿಫಾರಸ್ಸನ್ನು ಒಪ್ಪಿಕೊಂಡು ಧಾರವಾಡ ಜಿಲ್ಲೆಯ ದಶಲಕ್ಷ ಬಾವಿ ಯೋಜನೆಯಲ್ಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ದುರುಪಯೋಗ ಪಡಿಸಿಕೊಂಡಿರುವ ರೂ.6,77,612/ ಗಳನ್ನು ಆರೋಪಿತ ಅಧಿಕಾರಿ/ನೌಕರರುಗಳು ವಸೂಲು ಮಾಡುವ ಹಾಗೂ ಕ್ರ.ಸಂ.(6)ರಲ್ಲಿರುವ ಆರೋಪಿತ ಅಧಿಕಾರಿಯವರನ್ನು ಹೊರತು ಪಡಿಸಿ, ಉಳಿದವರು ಕೆಲಸದಲ್ಲಿ ನಿರಾಸಕ್ತಿ ತೋರಿಸಿ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದರಿಂದ ಈ ಕೆಳಕಂಡ ದಂಡನೆಯನ್ನು ವಿಧಿಸಿ ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:28-05-1999ರ ಸರ್ಕಾರಿ ಆದೇಶದಲ್ಲಿ ಆದೇಶಿಸಲಾಗಿತ್ತು.

(ಅ) ಸರ್ಕಾರಕ್ಕೆ ಉಂಟಾದ ನಷ್ಟದ ಹಣ ರೂ.3,05,080 ಗಳಿಗೆ ಆಪಾದಿತರಾದಂತಹ ಕ್ರ.ಸಂ. 1,2,3,4,9 ಮತ್ತು 10ನೇ ಆರೋಪಿತ ಅಧಿಕಾರಿಗಳು/ನೌಕರರುಗಳು ಸಾಮೂಹಿಕವಾಗಿ ಜವಾಬ್ದಾರಾಗಿರುವುದರಿಂದ ಅವರುಗಳಿಂದ ವಸೂಲು ಮಾಡುವುದು.

(ಆ) ಸರ್ಕಾರಕ್ಕೆ ನಷ್ಟ ಉಂಟು ಮಾಡಿದ ಹಣ ರೂ.2,29,420 ಗಳನ್ನು ಆಪಾದಿತರಾದತಹ ಕ್ರ.ಸಂ.1,2,3,5,9 ಮತ್ತು 10ನೇ ಆಪಾದಿತರುಗಳಿಂದ ವಸೂಲು ಮಾಡುವುದು.

(ಇ) ಸರ್ಕಾರಕ್ಕೆ ನಷ್ಟವಾದ ಹಣ ರೂ. 70,198.00ಗಳನ್ನು ಕ್ರಮ ಸಂಖ್ಯೆ 1,2,3,6,9 ಮತ್ತು 10ನೇ ಆಪಾದಿತರುಗಳಿಂದ ವಸೂಲು ಮಾಡುವುದು.

(ಈ) ಕ್ರಮ ಸಂಖ್ಯೆ: 1,2,3,7,9 ಮತ್ತು 10ನೇ ಆಪಾದಿತರುಗಳಿಂದ ಉಂಟಾದ ನಷ್ಟದ ಹಣ ರೂ.29,682/-ಗಳನ್ನು ಅವರುಗಳಿಂದ ವಸೂಲು ಮಾಡುವುದು.

(ಉ) ಕ್ರಮ ಸಂಖ್ಯೆ: 1,2,3,8,9 ಮತ್ತು 10ನೇ ಆಪಾದಿತರುಗಳಿಂದ ರೂ. 37,584/-ಗಳ ನಷ್ಟದ ಹಣವನ್ನು ವಸೂಲು ಮಾಡುವುದು.

(ಊ) ಆಪಾದಿತರಾದ ಕ್ರಮ ಸಂಖ್ಯೆ: 1,2,3,9, 10 ಮತ್ತು 11ನೇ ಆರೋಪಿತರು ಗಳಿಂದ ರೂ.10,247.00 ಗಳ ನಷ್ಟದ ಹಣವನ್ನು ಅವರುಗಳಿಂದ ವಸೂಲು ಮಾಡುವುದು.

ಶ್ರೀ ಹನುಮಂತಚಾರ್ಯ, ನಿವೃತ್ತ ಉಪ ಕೃಷಿ ನಿರ್ದೇಶಕರನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214ರಲ್ಲಿ ನಿಗದಿಪಡಿಸಿದ ಅಧಿಕಾರದಂತೆ ಅವರು ನಿವೃತ್ತಿ ವೇಳೆಯಲ್ಲಿ ಹೊಂದಿದ್ದ ಹುದ್ದೆಯ ವೇತನ ಶ್ರೇಣಿಯಲ್ಲಿನ ಕೆಳಗಿನ ಕಾಲಿಕ ವೇತನ ಶ್ರೇಣಿಗೆ Lower Time Scale of Pay) ಇಳಿಸಿ, ಅನಂತರ ಪಿಂಚಣಿ ನಿಗದಿಪಡಿಸುವುದು. ಮತ್ತು ಉಳಿದಂತಹ ಕ್ರಮ. ಸಂ. 2ರಿಂದ 5 ಹಾಗೂ ಕ್ರಮ ಸಂಖ್ಯೆ 7 ರಿಂದ 11 ರವರೆಗಿನ ಅಧಿಕಾರಿಗಳು/ನೌಕರರುಗಳಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ1957ರ ನಿಯಮ 8(v) ರಡಿಯಲ್ಲಿ ನಿಗದಿಪಡಿಸಿರುವ ದಂಡನೆಯಂತೆ ಅವರುಗಳ ವೇತನವನ್ನು ಅವರುಗಳು ಹೊಂದಿದ ವೇತನ ಶ್ರೇಣಿಯಲ್ಲಿ ಕೆಳಗಿನ ಕಾಲಿಕ ವೇತನ ಶ್ರೇಣಿಗೆ (Lower Time Scale of Pay) ಇಳಿಸುವುದು.

ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರುಗಳ ಪೈಕಿ ಕ್ರಮ ಸಂಖ್ಯೆ:9ರ ಆಪಾದಿತ ಅಧಿಕಾರಿಯವರಾದ ಶ್ರೀ ಬಿ.ಜಿ. ನವಲಗುಂದ, ಹಿಂದಿನ ಕೃಷಿ ಸಹಾಯಕ ಇವರು ತಮಗೆ ವಿಧಿಸಿದ ದಂಡನೆಯ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 24029/99 ರಲ್ಲಿ ಅರ್ಜಿ ಸಲ್ಲಿಸಿ ಪ್ರಶ್ನಿಸಿದ್ದು ಸದರಿ ಪ್ರಕರಣವನ್ನು ಘನ ಕರ್ನಾಟಕ ಉಚ್ಚ ನ್ಯಾಯಾಲಯ ಮೇಲೆ ಓದಲಾದ ಕ್ರ.ಸಂ.(3)ರ ಪತ್ರದಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ವರ್ಗಾಯಿಸಿತು. ನಂತರ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 6482/2001ರಲ್ಲಿ ಪ್ರಕರಣ ದಾಖಲಿಸಿಕೊಂಡು, ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಂಡಿತ್ತು.

ಶ್ರೀ ಬಿ.ಜಿ. ನವಲಗುಂದ, ಹಿಂದಿನ ಕೃಷಿ ಸಹಾಯಕ, ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಕಚೇರಿ, ಜಲಾನಯನ ಅಭಿವೃದ್ಧಿ ಇಲಾಖೆ, (ಪ್ರಸ್ತುತ ಸಹಾಯಕ ಕೃಷಿ ಅಧಿಕಾರಿ, ಕಾಡಾ, ಮಲಪ್ರಭಾ ಯೋಜನೆ, ಧಾರವಾಡ) ಧಾರವಾಡ ಇವರಿಗೆ ಸದರಿ ದಂಡನಾದೇಶ ನಿಮಿತ್ತ ತಡೆಹಿಡಿಯಲಾದ ಎಲ್ಲಾ ಸಾಂದರ್ಭಿಕ ಸೌಲಭ್ಯಗಳನ್ನು (Consequential Benefits) ಮಂಜೂರು ಮಾಡಲು ಸಹ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ

ಇವರಿಗೆ:-

1) ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ ಜಿಇ-05), ಕರ್ನಾಟಕ, ಬೆಂಗಳೂರು.
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು, ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ), ಮಲಪ್ರಭಾ ಯೋಜನೆ, ಧಾರವಾಡ.
5) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಧಾರವಾಡ ಜಿಲ್ಲಾ ಪಂಚಾಯತ್/ ಹಾವೇರಿ ಜಿಲ್ಲಾ ಪಂಚಾಯತ್.
6) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
7) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
8) ಜಂಟಿ ಕೃಷಿ ನಿರ್ದೇಶಕರು, ಧಾರವಾಡ ಜಿಲ್ಲೆ/ ಹಾವೇರಿ ಜಿಲ್ಲೆ.
9) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ/ಹಾವೇರಿ.
10) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
11) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
12) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
13) ಸಂಬಂಧಪಟ್ಟ ನೌಕರರಿಗೆ (ಕೃಷಿ ಆಯುಕ್ತರ ಮೂಲಕ)
14) ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.